‘ಮಗುವಿನ ಕತ್ತಿನ ಮೂಲಕ ಇಸಿಎಂಒ ಅನ್ನು ಸಣ್ಣ ರಂಧ್ರದ ಮೂಲಕ ತೂರಿಸಿ ಬಹಳ ಸವಾಲೆನಿಸುವ ಚಿಕಿತ್ಸೆ ನೀಡಿದೆವು. ಈ ಸುಧಾರಿತ ತಂತ್ರಜ್ಞಾನದಿಂದಾಗಿ ರೋಗಿ ಆಸ್ಪತ್ರೆಯಲ್ಲಿ ಇರಬೇಕಾದ ಅವಧಿ ಕಡಿಮೆ. ಮಗು ಬದುಕಿ ಉಳಿಯುವ ಸಾಧ್ಯತೆ ಹೆಚ್ಚು’ ಎಂದು ಹೇಳುತ್ತಾರೆ ಈ ಚಿಕಿತ್ಸಾ ಕ್ರಮದಲ್ಲಿ ಅತ್ಯಂತ ಪರಿಣಿತಿ ಸಾಧಿಸಿದ ನಾರಾಯಣ ಹೆಲ್ತ್ ಸಿಟಿಯ ಮಕ್ಕಳ ಹೃದಯ ಶಸ್ತ್ರಚಿಕಿತ್ಸಕ ಡಾ. ಸುದೇಶ್ ಪ್ರಭು.

‘ಒಂದು ಅಂದಾಜಿನ ಪ್ರಕಾರ ಶೇ.15ರಷ್ಟು ಹೆರಿಗೆಗಳಲ್ಲಿ ಶಿಶುಗಳು ಮಲವನ್ನು ಕುಡಿಯುತ್ತವೆ. ಇದರಲ್ಲಿ ಶೇ.10ರಷ್ಟು ಮಕ್ಕಳ ಸಮಸ್ಯೆ ಗಂಭೀರವಾಗಿರುತ್ತದೆ. ಅಲ್ಲದೆ ಮಗುವಿನ ಶ್ವಾಸ ತೆಗೆದುಕೊಳ್ಳಲು ಆಗದಂಥ ಪರಿಸ್ಥಿತಿ ಉಂಟಾಗುತ್ತದೆ. ಇಂಥ ಮಕ್ಕಳನ್ನು ಕಾಪಾಡುವುದಕ್ಕಾಗಿ ಇವುಗಳನ್ನು ‘ಬ್ರೀದಿಂಗ್ ಮೆಷಿನ್’ ಒಳಗೆ ಇಡುತ್ತಾರೆ. ಇಲ್ಲಿ ಮಗುವಿನ ಹೃದಯ ಹಾಗೂ ಶ್ವಾಸಕೋಶವನ್ನು ಸರಿಪಡಿಸಲು ನೈಟ್ರಿಕ್ ಆಕ್ಸೈಡ್ ಇರುವ ಔಷಧಿ ಹಾಕಿ ರಕ್ಷಣೆ ಮಾಡಲಾಗುತ್ತದೆ. ಈ ಮೆಷಿನ್ ಒಳಗಿಟ್ಟ ಮೇಲೆ ಒಂದೆರಡು ದಿನಗಳಲ್ಲಿ ಮಗುವಿನ ಉಸಿರಾಟ ಸರಾಗವಾಗುತ್ತದೆ’ ಎನ್ನುತ್ತಾರೆ ಡಾ. ಸುದೇಶ್.

‘ಅಮೆರಿಕ, ಇಂಗ್ಲೆಂಡ್, ಆಸ್ಟ್ರೇಲಿಯಾ ಮುಂತಾದ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ವೈದ್ಯಕೀಯ ತಂತ್ರಜ್ಞಾನ ಸಾಕಷ್ಟು ಅತ್ಯಾಧುನಿಕವಾಗಿದ್ದು, ಇಂಥ ಸಮಸ್ಯೆ ಇರುವ ಮಕ್ಕಳ ಆರೈಕೆ ಇದೇ ತಂತ್ರಜ್ಞಾನದಲ್ಲಿ 1975ರಿಂದಲೇ ಮಾಡಲಾಗುತ್ತಿದೆ. ಆದರೆ ಭಾರತದಲ್ಲಿ ಈ ತಂತ್ರಜ್ಞಾನ ಬಂದದ್ದು ಇದೇ ಮೊದಲು. ಇಡೀ ಭಾರತದಲ್ಲಿ ಇಂಥ ಪ್ರಕರಣಗಳು ಇದುವರೆಗೆ ಮೂರು ಪತ್ತೆಯಾಗಿದ್ದು, ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಈ ತಂತ್ರಜ್ಞಾನ ಬಳಸಿ ಚಿಕಿತ್ಸೆ ನೀಡಿದ ಮಗು ಸಂಪೂರ್ಣ ಚೇತರಿಸಿಕೊಂಡಿದೆ’ ಎನ್ನುತ್ತಾರೆ ಡಾ.ರಿಯಾನ್.

‘ಈ ಮಗುವಿಗೆ ತುರ್ತು ಚಿಕಿತ್ಸಾ ಘಟಕದಲ್ಲೇ ಚಿಕಿತ್ಸೆ ನೀಡಬೇಕು. ಇದಕ್ಕೂ ಮುನ್ನ ಹೆತ್ತವರೊಂದಿಗೆ ಚರ್ಚಿಸಿದ ಬಳಿಕವೇ ಚಿಕಿತ್ಸೆ ಆರಂಭಿಸಬೇಕು. ಶೇ.90ರಷ್ಟು ಯಶಸ್ಸಿನ ಮಟ್ಟ ಇದ್ದರೂ ಕೆಲವು ಸಂದರ್ಭಗಳಲ್ಲಿ ಮಗು ಉಳಿಯುತ್ತದೆ ಎಂಬ ಸಂಪೂರ್ಣ ಭರವಸೆ ನೀಡುವುದು ಕಷ್ಟವಾಗುತ್ತದೆ. ಶೇ. 10ರಷ್ಟು ಚಿಕಿತ್ಸೆ ವಿಫಲವಾಗುವ ಸಾಧ್ಯತೆಯೂ ಇದೆ’ ಎಂದು ಹೇಳುತ್ತಾರೆ ಈ ವೈದ್ಯರು.

‘ಕೆಲವು ಸಂದರ್ಭದಲ್ಲಿ ಮಗುವಿನ ಎದೆಯ ಭಾಗದಲ್ಲಿ ಸರ್ಜರಿ ಮಾಡಿ ಶ್ವಾಸಕೋಶದ ತುಂಬ ತುಂಬಿಕೊಂಡ ಮಲವನ್ನು ಸ್ವಚ್ಛ ಮಾಡಬೇಕಾಗುತ್ತದೆ. ಆದರೆ ನಾರಾಯಣ ಹೃದಯಾಲಯದಲ್ಲಿ ಇತ್ತೀಚೆಗೆ ಮಾಡಿದ ಪ್ರಕರಣದಲ್ಲಿ ಮಗುವಿನ ಕತ್ತಿನ ಭಾಗದಲ್ಲಿ ಸಣ್ಣ ರಂಧ್ರ ಮಾಡಿ ಈ ಚಿಕಿತ್ಸೆ ಮಾಡಲಾಗಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಇದು ಮೊದಲ ಪ್ರಕರಣವಾಗಿದ್ದು, ಈ ಯಶಸ್ಸು ನಾರಾಯಣ ಹೃದಯಾಲಯಕ್ಕೆ ಸಲ್ಲಬೇಕು’ ಎಂದು ಹೇಳುತ್ತಾರೆ ಡಾ.ರಿಯಾನ್.

ಇಸಿಎಂಒ ಎಂಬುದು ದುಬಾರಿ ಚಿಕಿತ್ಸೆ. ವಿಶ್ವದಾದ್ಯಂತ ಪ್ರತಿ ವರ್ಷ ಈ ಸಮಸ್ಯೆಯಿಂದ ಹಲವಾರು ಮಕ್ಕಳು ಬಳಲುತ್ತಿದ್ದಾರೆ. ಆದರೂ ಅತ್ಯಾಧುನಿಕ ಚಿಕಿತ್ಸೆ ಲಭ್ಯವಿರುವುದರಿಂದ ಸುಮಾರು 7,000ದಷ್ಟು ಮಕ್ಕಳು ಬದುಕಿ ಉಳಿಯಲು ಸಾಧ್ಯವಾಗಿದೆ. ಬದುಕಿ ಉಳಿಯುವ ಮಕ್ಕಳ ಪೈಕಿ ಭಾರತ ಮೂರನೇ ಸ್ಥಾನದಲ್ಲಿದೆ.

ನಾರಾಯಣ ಹೆಲ್ತ್ ಸಿಟಿ 500ಕ್ಕೂ ಅಧಿ ಇಸಿಎಂಒ ಅನ್ನು ಕಳೆದ 10 ವರ್ಷಗಳಲ್ಲಿ ಮಾಡಿದೆ. ಮೂರನೇ ಎರಡರಷ್ಟು ಪ್ರಕರಣಗಳು ಪೀಡಿಯಾಟ್ರಿಕ್ ಇಸಿಎಂಒ ಆಗಿದೆ. ನಾವು ಯಶಸ್ವಿಯಾಗಿ ಅನೇಕ ನವಜಾತ ಶಿಶುಗಳಿಗೆ ಈ ಮೊದಲು ಇಸಿಎಂಒಗೆ ಒಳಪಡಿಸಿದ್ದೇವೆ. ಬಹುತೇಕ ಎಲ್ಲ ಮರುಕಳಿಸಿದ ಹೃದ್ರೋಗ ವೈಫಲ್ಯ ಸಮಸ್ಯೆ ಕಂಡು ಬಂದಿತ್ತು. ಇದೇ ಮೊದಲ ಬಾರಿಗೆ ನವಜಾತ ಶಿಶುವಿಗೆ ಇಸಿಎಂಒ ಅನ್ನು ಶ್ವಾಸನಾಳದ ವೈಫಲ್ಯಕ್ಕೆ ನೆರವೇರಿಸಲಾಗಿದೆ.

**ವೈದ್ಯರ ಸಂಪರ್ಕ: 080–71222222**

ಜಾಹೀರಾತು

# ಬೊಜ್ಜುತನಕ್ಕೆ ವೈಜ್ಞಾನಿಕ ಪರಿಹಾರ – ಲೈಪೋಸಕ್ಷನ್



ಬೊಜ್ಜುತನ ಒಂದು ಸಾಮಾಜಿಕ ಸಮಸ್ಯೆಯಾಗಿದ್ದು, ಇದಕ್ಕೆ ಶಾಶ್ವತ ಪರಿಹಾರ ಪಡೆಯುವ ನಿಟ್ಟಿನಲ್ಲಿ ಅನೇಕ ರೀತಿಯ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಇದೆ. ಕೆಲವು ಪ್ರಯತ್ನಗಳು ಯಾವುದೇ ಪ್ರಯೋಜನವಾಗದೇ ಇರಬಹುದು, ಕೆಲವರಿಗೆ ತಾತ್ಕಾಲಿಕ ಉತ್ತರದಿಂದ ಬೇಸತ್ತಿ ಹೋಗಿರಬಹುದು, ಆದರೆ ಬೊಜ್ಜಿಗೆ ವೈಜ್ಞಾನಿಕ ಪರಿಹಾರವೆಂದರೆ ಲೈಪೋಸಕ್ಷನ್ ಆಗಿರುತ್ತದೆ.

ಬೊಜ್ಜುತನ ಎಲ್ಲಾ ವಯಸ್ಸಿನವರಿಗೂ, ಅದರಲ್ಲೂ ಮಹಿಳೆಯರಿಗೆ ಹೆಚ್ಚಿನ ಸಮಸ್ಯೆಯಿರುತ್ತದೆ. ಬೊಜ್ಜುತನ ಸಾಮಾನ್ಯವಾಗಿ ಹೊಟ್ಟೆಯ ಸುತ್ತ ಕಾಣಿಸಿದರೂ ದೇಹದ ಯಾವುದೇ ಭಾಗಕ್ಕೆ ಆವರಿಸಬಹುದು. ಬೊಜ್ಜುತನ ಸ್ವಲ್ಪ ಪ್ರಮಾಣದಿಂದ ಹೆಚ್ಚಿನ ಪ್ರಮಾಣದವರೆಗೂ ತೊಂದರೆ ಕೊಡಬಹುದು. ಬೊಜ್ಜುತನ ಇರುವವರು ಸಮತೋಲನ ಆಹಾರ ಸೇವನೆ, ನಿಯಮಿತ ವ್ಯಾಯಾಮ ಜೀವನ ಪರ್ಯಂತ ಪಾಲಿಸಬೇಕಾಗುತ್ತದೆ. ಇದರಲ್ಲೇ ಕೆಲವರಿಗೆ ಪರಿಹಾರ ಸಿಗಬಹುದು, ತಾತ್ಕಾಲಿಕವಾಗಿರಬಹುದು ಅಥವಾ ಪೂರ್ಣ ಪ್ರಮಾಣದಲ್ಲಿ ಪ್ರಯೋಜನವಾಗದೆಯೂ ಇರಬಹುದು ಅಥವಾ ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಕ್ಕೆ ಕಷ್ಟವಾಗಬಹುದು. ಇಂತಹ ಸಂದರ್ಭಗಳಲ್ಲಿ ಮತ್ತು ನೈಸರ್ಗಿಕ ಪರಿಹಾರಗಳ ಜೊತೆ ಜೊತೆಯಲ್ಲಿ ಲೈಪೋಸಕ್ಷನ್ ವಿಧಾನ ಬೊಜ್ಜಿನ ಭಾರ ಇಳಿಸುವುದಕ್ಕೆ ಮತ್ತು ದೇಹಕ್ಕೆ ಒಂದು ಸುಂದರ ಆಕಾರ ನೀಡಲು ಸಹಕಾರಿಯಾಗಿರುತ್ತದೆ.

ಲೈಪೋಸಕ್ಷನ್ ಒಂದು ಸುರಕ್ಷಿತ ಶಸ್ತ್ರಚಿಕಿತ್ಸಾ ವಿಧಾನವಾಗಿದ್ದು, ಅತ್ಯಾಧುನಿಕ ತಾಂತ್ರಿಕತೆಯ ಸಹಾಯದಿಂದ ಬೊಜ್ಜುತನಕ್ಕೆ ಶಾಶ್ವತವಾದ ಪರಿಹಾರವನ್ನು ಕೊಡುತ್ತದೆ. ದೇಹಕ್ಕೆ ಸುಂದರ ರೂಪ ಕೊಡುವುದರ ಜೊತೆಗೆ ಅನೇಕ ಆರೋಗ್ಯ ಸಮಸ್ಯೆಗಳು ಬರದಂತೆ ತಡೆಗಟ್ಟಬಹುದು ಅಥವಾ ಸಮಸ್ಯೆಗಳಿದ್ದರೆ ಉತ್ತಮಗೊಳಿಸಲು ಇದು ಸಹಕಾರಿಯಾಗಿರುತ್ತದೆ.

**ಇನ್ನಿತರೆ ಸೇವೆಗಳು** : ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಸ್ತನಗಳ ಗಾತ್ರ ಹೆಚ್ಚಿಸುವುದು / ಕಡಿಮೆ ಮಾಡುವುದು, ಮೂಗಿನ ವಿಕಾರತೆ ಸರಿಪಡಿಸುವುದು, ಕೆನ್ನೆಗುಳಿ, ಮುಖದ ಕಾಸ್ಮೆಟಿಕ್ ಸರ್ಜರಿಗಳು, ಪುರುಷರ ಎದೆಯ ಸರ್ಜರಿ ಇತ್ಯಾದಿ...

**ಡಾ : ಗಿರೀಶ್ ಎ. ಸಿ., ಪ್ಲಾಸ್ಟಿಕ್ ಮತ್ತು ಕಾಸ್ಮೆಟಿಕ್ ಸರ್ಜನ್, ಕರ್ಲ್ಸ್ ಮತ್ತು ಕರ್ವ್ಸ್ ಹೇರ್ ಟ್ರಾನ್ಸ್‌ಪ್ಲಾಂಟೇಷನ್ ಮತ್ತು ಕಾಸ್ಮೆಟಿಕ್ ಸರ್ಜರಿ ಸೆಂಟರ್, ರಾಜಾಜಿನಗರ ಮತ್ತು ಕೋರಮಂಗಲ, ಬೆಂಗಳೂರು.** www.curlsncurves.com

**8088400400** **9448571216**

"ಭಾರತ್ ಜ್ಯೋತಿ" ಮತ್ತು "ಅತ್ಯಂತ ಭರವಸೆಯ ಕಾಸ್ಮೆಟಿಕ್ ಸರ್ಜರಿ ಸೆಂಟರ್" ಈ ಪ್ರಶಸ್ತಿಗಳಲ್ಲದೆ ಇನ್ನಿತರ ಹಲವಾರು ಪ್ರತಿಷ್ಠಿತ ಪ್ರಶಸ್ತಿ ವಿಜೇತರು